# 2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಮಾಲೂರು

## ಸಿ.ಸಿ.ನಂ. 1108/2023

| | | |
|---|---|---|
| ಹೆಸರುಃ | ಗೋಪಾಲಪ್ಪ | ಚಾಸಾ-5 ಪ್ರಾಸಾ-4 |
| ತಂದೆಯ ಹೆಸರುಃ | ಪಿಯಪ್ಪ | ಸಾಕ್ಷ್ಯಿಯನ್ನು ದಿಃ 05.08.2026 ರಂದು ಪ್ರಮಾಣೀಕರಿಸಲಾಯಿತು. |
| ವಯಸ್ಸುಃ | 67 ವರ್ಷ | |
| ಉದ್ಯೋಗಃ | ವಯೋವೃದ್ದರು | |
| ವಾಸಸ್ಥಳಃ | ಚನ್ನಕಲ್ | |

## ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ

ಆರೋಪಿತರ ಪರಿಚಯ ನನಗೆ ಇದೆ. ಸುಮಾರು 2 ರಿಂದ 3 ವರ್ಷದ ಹಿಂದೆ ಚಾಸಾ.4 ರವರ ಮನೆಯ ಮುಂದೆ ಖಾಲೀ ಜಾಗವಿದ್ದು, ಆರೋಪಿತರು ಖಾಲೀ ಜಾಗದ ವಿಷಯ ಬಾಬ್ತು ಗಲಾಟೆ ಮಾಡುತ್ತಿದ್ದರು. ಸದರಿ ಸಮಯಕ್ಕೆ ಪೊಲೀಸ್ ವಾಹನ ಬಂದಿದ್ದು, ಪೊಲೀಸರ ವಿರುದ್ದ ಕೂಡ ಆರೋಪಿತರು ಗಲಾಟೆ ಮಾಡಿರುತ್ತಾರೆ. ಈ ಘಟನೆ ಸುಮಾರು ರಾತ್ರಿ 10.15 ಸಮಯಕ್ಕೆ ನಡೆದಿರುತ್ತದೆ. ಪೊಲೀಸರ ವಾಹನವನ್ನು ತಡೆಗಟ್ಟಿ ಆರೋಪಿತರು ಗಲಾಟೆ ಮಾಡಿರುತ್ತಾರೆ. ನಾವುಗಳು ಆರೋಪಿತರನ್ನು ತಡೆದು ಪೊಲೀಸರಿಗೆ ಹೋಗಲು ತೆರವು ಮಾಡಿಕೊಟ್ಟಿರುತ್ತೇವೆ. ಈ ಎಲ್ಲಾ ವಿಚಾರವನ್ನು ನಾನು ಪೊಲೀಸರ ಮುಂದೆ ಹೇಳಿಕೆ ನೀಡಿದ್ದೇನೆ.

## ಪಾಟೀ ಸವಾಲುಃ ಆರೋಪಿ ಪರ ಶ್ರೀ ಸಿ.ಎಂ.ಎನ್. ವಕೀಲರಿಂದಃ

ನಾನು ಮಾಲೂರಿನಲ್ಲಿ 2022 ರಿಂದ ವಾಸವಾಗಿದ್ದೇನೆ. ಆರೋಪಿತರು ಹಾಗೂ ಚಾಸಾ.4 ಸಂಬಂಧಿಕರು ಎಂದರೆ ಸರಿ. ಆರೋಪಿ 7 ರವರ ಅಕ್ಕ ಚಾಸಾ.4 ರವರ ತಾಯಿ ಎಂದರೆ ಸರಿ. ಚಾಸಾ.4 ರವರ ಮಗಳನ್ನು ನಾನು ಮದುವೆಯಾಗಿದ್ದೇನೆ ಎಂದರೆ ಸರಿ. ಚಾಸಾ.4 ಹಾಗೂ ಆರೋಪಿತರ ನಡುವೆ ಚಾಸಾ.4 ರವರ ಮನೆಯ ಹಾಗೂ ಮನೆಯ ಮುಂದೆ ಇರುವ ಜಾಗದ ವಿಚಾರವಾಗಿ 2009 ರಿಂದ

ನ್ಯಾಯಾಲಯದಲ್ಲಿ ಸಿವಿಲ್ ವ್ಯಾಜ್ಯಗಳು ನಡೆಯುತ್ತಿದೆ ಎಂದರೆ ಸರಿ. ಚಾಸಾ.4 ರವರ ತಾಯಿ ಯಾವ ಸ್ಥಳಕ್ಕೆ ಮದುವೆಯಾಗಿ ಹೋಗಿದ್ದಾರೆ ಎಂದು ನನಗೆ ಗೊತ್ತಿಲ್ಲ. ಚಾಸಾ.4 ರವರ ತಾಯಿಯನ್ನು ಅರಳೇರಿ ಗ್ರಾಮಕ್ಕೆ ಕೊಟ್ಟು ಮದುವೆ ಮಾಡಲಾಗಿದೆ ಎಂದರೆ ಸರಿ. ಚಾಸಾ.4 ರವರ ತಾಯಿ (ನನ್ನ ಅತ್ತೆ) ತನ್ನ ಗಂಡನ ಮನೆ ಬಿಟ್ಟು ತವರು ಮನೆಗೆ ಬಂದು ವಾಸ ಇದ್ದರು ಎಂದರೆ ಇರಬಹುದು. ಸದರಿ ಮನೆಗೆ ಸೇರಿದ ನಂತರ ಖಾತೆ ಸೃಷ್ಟಿ ಮಾಡಿಕೊಂಡ ವಿಚಾರದಲ್ಲಿ ಗಲಾಟೆ ನಡೆಯುತ್ತಿದೆ ಎಂದರೆ ನನಗೆ ಗೊತ್ತಿಲ್ಲ. ಗಲಾಟೆ ನಡೆದ ಸಮಯಕ್ಕೆ ನನ್ನ ಅತ್ತೆಯನ್ನು ನೋಡಲು ನಾನು 9.45 ರಿಂದ 10.00 ಗಂಟೆ ಸಮಯಕ್ಕೆ ಚನ್ನಕಲ್ ಗ್ರಾಮಕ್ಕೆ ಬಂದಿರುತ್ತೇನೆ. ನಾನು ಚನ್ನಕಲ್ ಗ್ರಾಮಕ್ಕೆ ಹೋಗುವ ಸಮಯಕ್ಕೆ ನನಗೆ ಗಲಾಟೆ ಬಗ್ಗೆ ಮಾಹಿತಿ ಸಿಕ್ಕಿರುವುದಿಲ್ಲ. ನಾನು ಘಟನಾ ಸ್ಥಳಕ್ಕೆ ತಲುಪಿದ 10 ರಿಂದ 15 ನಿಮಿಷಗಳ ನಂತರ ಗಲಾಟೆ ಪ್ರಾರಂಭವಾಗಿರುತ್ತದೆ. ಘಟನೆ ನಡೆದ ಮನೆಯ ಅಂಗಳ ನನ್ನ ಅತ್ತೆಯ ಮನೆ ಆಗಿದ್ದು, ಅಲ್ಲಿಗೆ ನಾನು ಹೋಗಿರುತ್ತೇನೆ. ಸದರಿ ಗಲಾಟೆ ಆರೋಪಿತರು ಖಾಲೀ ಜಾಗದ ವಿಚಾರವಾಗಿ ಪ್ರಾರಂಭಿಸಿರುತ್ತಾರೆ. ಗಲಾಟೆ ಸಮಯದಲ್ಲಿ ಸುಮಾರು 10 ರಿಂದ 15 ಜನ ಸೇರಿರುತ್ತಾರೆ. ಗಲಾಟೆ ನಡೆದ ಸ್ಥಳದ ಚೆಕ್ಕುಬಂದಿ ನನಗೆ ಹೇಳಲು ಸಾಧ್ಯವಿಲ್ಲ. ಗಲಾಟೆ ನಡೆದ ಸಮಯಕ್ಕೆ ಇಬ್ಬರು ಪೊಲೀಸರು ಪೊಲೀಸ್ ವಾಹನದಲ್ಲಿ ಬಂದರು. ಇಬ್ಬರು ಪೊಲೀಸರನ್ನು ಹೊರತುಪಡಿಸಿ ಬೇರೆ ಯಾರೂ ಸ್ಥಳಕ್ಕೆ ಬಂದಿರಲಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿಯು ನಾನು ನೋಡಿಲ್ಲ ಎಂದು ನುಡಿಯುತ್ತಾರೆ. ಪೊಲೀಸರ ಹೆಸರು, ಗಾಡಿ ನಂಬರ್ ನನಗೆ ಹೇಳಲು ಸಾಧ್ಯವಿಲ್ಲ. ಪೊಲೀಸರು 10.15 ಗಂಟೆಗೆ ಬಂದಿದ್ದು, 10.45 ಸಮಯಕ್ಕೆ ತೆರಳಿರುತ್ತಾರೆ. ನಾನು ಸುಮಾರು 25 ವರ್ಷಗಳ ಕಾಲದಿಂದ ಚನ್ನಕಲ್ ನಲ್ಲಿ ವಾಸವಾಗಿದ್ದೇನೆ. ಘಟನೆ ಸಮಯಕ್ಕೆ ಊರಿನವರು ಯಾರು ಯಾರು ಬಂದಿದ್ದರು ಎಂದು ಸಂಕ್ಷಿಪ್ತವಾಗಿ ನನಗೆ ಹೇಳಲು ಸಾಧ್ಯವಿಲ್ಲ. ಯಾವ ಯಾವ ಆರೋಪಿ ಯಾವ ರೀತಿ ಅವಾಚ್ಯ ಶಬ್ದಗಳಿಂದ ಪೊಲೀಸರಿಗೆ ಬೈದಿರುತ್ತಾರೆ ಎಂದು ನನಗೆ ಹೇಳಲು ಸಾಧ್ಯವಿಲ್ಲ. ಆರೋಪಿತರು ಪೊಲೀಸರ ವಾಹನಕ್ಕೆ ಯಾವ ರೀತಿ ಅಡ್ಡಪಡಿಸಿದರು ಎಂಬ ಪ್ರಶ್ನೆಗೆ ಸಾಕ್ಷಿಯು ಎಲ್ಲಾ ಆರೋಪಿತರು ಸೇರಿ ಪೊಲೀಸರಿಗೆ ಇಲ್ಲಿಗೆ ಬರಬೇಡಿ ಎಂದು

ಅಡ್ಡಪಡಿಸಿದರು ಎಂದು ನುಡಿಯುತ್ತಾರೆ. ಪೊಲೀಸರ ವಿರುದ್ಧ ದೌರ್ಜನ್ಯ ತೋರಿಸಿ ಪೊಲೀಸರನ್ನು ಆರೋಪಿತರು ವಾಪಸ್ ಕಳುಹಿಸಿರುತ್ತಾರೆ. ಘಟನ ನಡೆದ ದಿನವೇ ನಾನು ಪೊಲೀಸ್ ಠಾಣೆಯಲ್ಲಿ ನನ್ನ ಹೇಳಿಕೆಯನ್ನು ರಾತ್ರಿ 11.00 ರಿಂದ 11.30 ಸಮಯಕ್ಕೆ ನೀಡಿರುತ್ತೇನೆ. ಯಾವುದೇ ಗಲಾಟೆ ಆಗಿಲ್ಲ, ಪೊಲೀಸರು ಸ್ಥಳಕ್ಕೆ ಬಂದಿಲ್ಲ, ನನ್ನ ಬಾಮ್ಮೈದನ ಮಾತನ್ನು ಕೇಳಿ ಪೊಲೀಸರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಯಾವ ಪೊಲೀಸರು ಘಟನೆ ಸ್ಥಳಕ್ಕೆ ಬಂದಿರುವ ಬಗ್ಗೆ ನಾನು ನನ್ನ ಹೇಳಿಕೆಯಲ್ಲಿ ಹೇಳಿಲ್ಲ. ಆರೋಪಿತರು ಯಾವುದೇ ಕೃತ್ಯ ಎಸಗದಿದ್ದರೂ, ಪೊಲೀಸರ ಜೊತೆ ಶಾಮೀಲಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

## ಮರು ವಿಚಾರಣೆ ಇಲ್ಲ:

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸರಿ ಇದೆ

**Sd/-**

(ನಿತಿನ್ ಕುವೆಲ್ಲೊ)
2 ನೇ ಅಪರ ಸಿ.ಜೆ. ಮತ್ತು ಜೆಎಂಎಫ್ ಸಿ
ಮಾಲೂರು.